(ಮತ್ತೆ ಸಭೆಯು ಮಧ್ಯಾಹ್ನ 4.05 ಗಂಟೆಗೆ ಪ್ರಾರಂಭಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

2. ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕ, 2012

ಅಧ್ಯಕ್ಷರು : ಕರ್ನಾಟಕ ಪೌರನಿಗಮಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕ, 2012

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ,

2012ನೇ ಸಾಲಿನ ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕವನ್ನು

ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : It is a very minor amendment. ಈಗಾಗಲೇ 13th Finance Commission ನಿಂದ 9 conditions ಹಾಕಿದ್ದರು. ಅದರಲ್ಲಿ ಒಂದು condition ಎಲ್ಲಾ local body accounts ಅನ್ನು Comptroller and Auditor General ಅವರಿಗೆ ಈ ಲೆಕ್ಕ ಪರಿಶೋಧನೆ ಮಾಡುವುದನ್ನು ವಹಿಸಬೇಕು, ಆ ವರದಿಯನ್ನು ವಿಧಾನ ಮಂಡಲದಲ್ಲಿಡಬೇಕೆಂದು ಇದೆ. ಇದನ್ನು ಮಾರ್ಚ್ 31ನೇ ತಾರೀಖಿನೊಳಗೆ ಮಾಡಬೇಕಾಗಿತ್ತು. ಅದಕ್ಕೋಸ್ಕರ ಮಾರ್ಚ್ 14ನೇ ತಾರೀಖಿನಂದು ನಾವು ಒಂದು Ordinance ಹೊರಡಿಸಿದ್ದೆವು, to replace this Ordinance this Bill has been introduced.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, Welcoming suggestion, ಮುನಿಸಿಪಾಲಿಟಿಯಲ್ಲಿ ಇಲ್ಲಿಯವರೆಗೂ ಏನಾಗಿತ್ತೆಂದರೆ ಎ.ಜಿ. ಯವರು ಯಾರೂ audit ಮಾಡುತ್ತಿರಲಿಲ್ಲ. ಈಗ audit ಮಾಡುವಂಥ provision ಅನ್ನು 13ನೇ ಹಣಕಾಸಿನಲ್ಲಿ ನಿಬಂಧನೆ ಇರುವುದರಿಂದ ಈಗ

ಮಾಡುವುದಕ್ಕೆ ಹೊರಟಿರುವುದು ಒಳ್ಳೆಯದೆ. ಆದರೆ ಒಂದು ಏನಾಗುತ್ತ ದೆಂದರೆ, Urban Local Bodies ಕೂಡ ಇವತ್ತು ಈ ವ್ಯಾಪ್ತಿಯಲ್ಲೇ ಬರುತ್ತದೆ. ಅದು ಬಿಬಿಎಂಪಿ ಇರಬಹುದು ಅಥವಾ ಬೇರೆ ಬೇರೆ ಇರಬಹುದು. ಅಲ್ಲೂ ಕೂಡ ಇವತ್ತು accounting system ಇದೆಯಲ್ಲಾ, ಇದು ಇನ್ನು standardize ಆಗಿಲ್ಲ. ಇದನ್ನು standardize ಮಾಡಬೇಕೆಂದರೆ uniform ಆಗಿ ಮಾಡಬೇಕು, effective ಆಗಿ ಮಾಡಬೇಕೆಂದರೆ they should sit in consultation with the AG earlier. ಎ.ಜಿ. ಯವರ ಹತ್ತಿರ ಕುಳಿತು ಮಾಡಿದಾಗ ಮಾತ್ರ ಇದನ್ನು ಮಾಡಿದ್ದಕ್ಕೂ ಪ್ರಯೋಜನವಾ ಗುತ್ತದೆ. ಇದನ್ನು ನಾನು welcome ಮಾಡುತ್ತೇನೆ, ಆದರೆ ಇದನ್ನು ಮಾರ್ಚ್ 31ಕ್ಕೆ ವಿಧಾನಸಭೆಗೆ ಮಂಡನೆ ಮಾಡುವುದಕ್ಕಿಂತ ಮುಂಚೆ ಇದರ ವ್ಯಾಪ್ತಿಯಲ್ಲಿ ನೂರಾರು ಮುನಿಸಿಪಾಲಿಟಿಗಳು ಬರುತ್ತವೆ. ಹಾಗಾಗಿ ಸಾಕಷ್ಟು ಮುನಿಸಿಪಾಲಿಟಿಗಳು ಇದರ ವ್ಯಾಪ್ತಿಯಲ್ಲಿ ಬರುವಂಥ ರೀತಿಯಲ್ಲಿ ನೀವು ಎ.ಜಿ.ಯವರ ಹತ್ತಿರ permission ತೆಗೆದುಕೊಂಡು standardize ಮಾಡುವಂಥದ್ದು ಬಹಳ ಮುಖ್ಯವಾಗುತ್ತದೆ. ಅದನ್ನು ತಾವು ಮಾಡಿದರೆ ಬಹಳ ಒಳ್ಳೆಯದು. I welcome it.

ಶ್ರೀ ಎಸ್. ಸುರೇಶ್ ಕುಮಾರ್ : ತಾವು amendment of Karnataka Act 22 section 3 ನೋಡಿ, in section 290, page No.2 in the proviso to sub-section 1 for the words 'Expenditure in a Municipality' the words 'audit of all City Municipal Councils, Town Municipal Councils and Town Panchayaths' shall be substituted. ಇವೆಲ್ಲವನ್ನೂ ಇದರೊಳಗೆ ತರುತ್ತಿದ್ದೇವೆ.

ಶ್ರೀ ಟಿಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾವು ಈ ಅಮೆಂಡ್ ಮೆಂಟ್ ಅನ್ನು ಒಪ್ಪುತ್ತೇವೆ. ಇದು ಅಮೆಂಡ್‌ಮೆಂಟ್ ಆದ ಮೇಲೆ, ನೀವು ಅದನ್ನು accounting system ಅನ್ನು standardize ಮಾಡಬೇಕಾದಾಗ, ಅಕಸ್ಮಾತ್ ಏನಾದರೂ ಅವಕಾಶವಿದ್ದರೆ ಇಲ್ಲೂ ಕೂಡ ಸೇರಿಸುವುದಕ್ಕೆ ಅವಕಾಶವಿದ್ದರೆ ಒಳ್ಳೆಯದು.

ಶ್ರೀ ಎಸ್. ಸುರೇಶ್ ಕುಮಾರ್ : ಈಗಾಗಲೇ ಇದರ ಬಗ್ಗೆ Accountant General ಕೂಡ ಏನೇನು ಮಾರ್ಪಾಟುಗಳನ್ನು ಮಾಡಬೇಕೆಂಬುದನ್ನು ಕೂಡ ಸೂಚಿಸಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಅದನ್ನು adopt ಮಾಡಿಕೊಳ್ಳುವುದಾದರೆ ಸರಿ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2012 ನೇ ಸಾಲಿನ ಕರ್ನಾಟಕ ಪೌರನಿಗಮಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2 ರಿಂದ 4

ಅಧ್ಯಕ್ಷರು : 2 ರಿಂದ 4 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.
2 ರಿಂದ 4 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು : ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಪ್ರಸ್ತಾಪ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ
ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2012ನೇ ಸಾಲಿನ ಕರ್ನಾಟಕ ಪೌರನಿಗಮಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕ್ಕೆ ಅನುಮೋದನೆ ದೊರಕಿದೆ